**O. S. No:03/2022**
**DW:2**

(ಇಂದು ದಿನಾಂಕಃ **17-10-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದಃ**

ವಾದಿಯ ಮನೆಯ ಹತ್ತಿರ ನನ್ನ ಮನೆ ಇರುವುದಿಲ್ಲ. ನಾನು ಮೂಲತಃ ನವಲಗುಂದದ ನಿವಾಸಿ ಅಲ್ಲ ಎಂದರೆ ಸರಿ. ನಾನು ಬ್ಯಾಂಕಿನ ನೌಕರ ಎಂದರೆ ಸರಿ. ನಾನು 36 ವರ್ಷಗಳ ಕಾಲ ಬ್ಯಾಂಕ್ ನಲ್ಲಿ ಬೇರೆ ಬೇರೆ ಊರುಗಳಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ನವಲಗುಂದದಲ್ಲಿ ನನಗೆ ಸಂಬಂಧಿಸಿ ಆಸ್ತಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಈ ಹಿಂದೆ ಇದ್ದು ಅದನ್ನು 2002 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ನನಗೆ ಒಬ್ಬ ಮಲ್ಲಪ್ಪ ನಿಂಗಪ್ಪ ಕಿರೇಸೂರ ರವರ ಪರಿಚಯವಿದೆ. ನಿಪಿ-19 ಮಲ್ಲಪ್ಪ ನಿಂಗಪ್ಪ ಕಿರೇಸೂರ ರವರ ಮದುವೆ ಆಮಂತ್ರಣ ಪತ್ರಿಕೆ ಎಂದರೆ ಇರಬಹುದು. ಸದರಿ ದಾಖಲೆ ಮಲ್ಲಪ್ಪ ಕಿರೇಸೂರ, ಮಹಾದೇವಪ್ಪ ತೋಟದ, ಮೂಗಪ್ಪ ಹೆಬ್ಬಳ್ಳಿ ಹಾಗೂ ಸಣ್ಣಫಕ್ಕೀರಪ್ಪ ಗೊಳಗೊಳಕಿ ರವರ ಒಟ್ಟಿಗೆಯಾದ ಮದುವೆಯಾದ ಆಮಂತ್ರಣ ಪತ್ರಿಕೆ ಎಂದರೆ ಇರಬಹುದು. ಸಾಕ್ಷಿಯು ಮುಂದುವರೆದು ಆಸ್ತಿಯ ಸಲುವಾಗಿ ಸದರಿ ದಾಖಲೆಯನ್ನು ಸೃಷ್ಟಿಸಿರಬಹುದು ಎಂದು ನುಡಿದಿರುತ್ತಾರೆ. ಸದರಿ ದಾಖಲೆಯಲ್ಲಿ ಸದರಿಯವರ ಹೆಂಡತಿಯರ ಹಸೆರು ಇದೆ ಎಂದರೆ ಇರಬಹುದು. 5ನೇ ಪ್ರತಿವಾದಿಯನ್ನು ಮೂಗಪ್ಪ ಹೆಬ್ಬಳ್ಳಿಯವರೊಂದಿಗೆ ವಿವಾಹ ಮಾಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮೂಗಪ್ಪ ಹೆಬ್ಬಳ್ಳಿಯವರ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ಮೂಗಪ್ಪನ ಅಕ್ಕನ ಮಗಳಿರುತ್ತಾಳೆ ಎಂದು ನುಡಿದಿರುತ್ತಾರೆ. ನನಗೆ ವಾದಿ ಹಾಗೂ ಮೂಗಪ್ಪ ರವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿ ಮೂಗಪ್ಪನ ಹೆಂಡತಿಯಾಗಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**